# ಸಂಸ್ಕೃತಿ ಮತ್ತು ನಾಗರಿಕತೆ

"ನಾವೇನಾಗಿರುವೆವೊ ಅದು ಸಂಸ್ಕೃತಿ ಮತ್ತು ನಾವು ಏನು ಪಡೆದಿರುವೆವೊ ಅದು ನಾಗರಿಕತೆ"—ಎಂಬುದು ಸಂಸ್ಕೃತಿ ಮತ್ತು ನಾಗರಿಕತೆ ಬಗೆಗಿನ ಒಂದು ಪ್ರಸಿದ್ಧ ಹೇಳಿಕೆ. ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ, ಆಂತರಿಕ ಶಾಂತಿ ಮತ್ತು ಆನಂದ, ನಮ್ಮ ನಡವಳಿಕೆ, ಇತರರೊಡನೆ ನಾವು ಹೊಂದಿರುವ ಉತ್ತಮ ಸಂಬಂಧ ಮತ್ತು ಸಾಮಾಜಿಕ ಸ್ಥಿರತೆ—ಇವು ಬಹುಮಟ್ಟಿಗೆ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ನಮ್ಮ ಬಾಹ್ಯ ಜೀವನಮಟ್ಟ, ಕೈಗಾರಿಕಾ ಬೆಳವಣಿಗೆ, ನಾವು ಹೊಂದಿರುವ ಸೌಲಭ್ಯಗಳು ಮತ್ತು ವಿಲಾಸವಸ್ತುಗಳು, ನಮ್ಮ ಭೌತಿಕ ಮತ್ತು ಬೌದ್ಧಿಕ ಸಂಪತ್ತು—ಇವು ನಮ್ಮ ನಾಗರಿಕತೆಯ ಅಳತೆಗೋಲು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಸಂಸ್ಕೃತಿ ಮತ್ತು ನಾಗರಿಕತೆಗಳು ಕ್ರಮವಾಗಿ ನಮ್ಮ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಜೀವನ ವನ್ನು ಪ್ರತಿನಿಧಿಸುತ್ತವೆ. ಇವೆರಡನ್ನೂ ಕ್ರಮವಾಗಿ ನಿಶ್ಶ್ರೇಯಸ ಮತ್ತು ಅಭ್ಯುದಯ ಎಂದೂ ಕರೆಯಬಹುದು.

ಇವೆರಡೂ ಪರಸ್ಪರ ಪೂರಕಗಳು. ಆದರೆ ನಾವು ಪಡೆದಿರು ವುದೇ ಪ್ರಧಾನವಾಗಿ ನಾವೇನಾಗಿರುವೆವೊ ಅದು ಗೌಣವಾದರೆ ಆಗ ಜೀವನ ಶೂನ್ಯವೂ ಅರ್ಥಹೀನವೂ ಆಗುತ್ತದೆ. ಜಿಡಿಪಿ, ಜಿಎನ್‌ಪಿ ಮುಂತಾದವುಗಳೇ ಬೆಳವಣಿಗೆಯ ಪ್ರಮಾಣವಾಗಿರುವ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಇದು ಹೆಚ್ಚು ಎದ್ದು ಕಾಣುವಂತಾಗಿದೆ. ಇತ್ತೀಚೆಗೆ ಅಮೆರಿಕದಲ್ಲಿ ಕೆಲವು ಸಾಮಾಜಿಕ ಹಿತಚಿಂತಕರು ಪ್ರಗತಿಯನ್ನು ಜಿಡಿಪಿ ಮೂಲಕ ಅಳೆಯುವ ಬದಲು Genuine Progress Indicator (GPI)—ಯಥಾರ್ಥ ಪ್ರಗತಿ ಸೂಚಕದ ಮೂಲಕ ಅಳೆಯಬೇಕು ಎಂದು ಭಾವಿಸುತ್ತಿದ್ದಾರೆ. ಯಥಾರ್ಥ ಪ್ರಗತಿಸೂಚಕಗಳಾವುವು? ಉತ್ತಮ ಆರೋಗ್ಯ, ವ್ಯವಸ್ಥಿತ ಕುಟುಂಬಜೀವನ, ನೆಮ್ಮದಿಯ ಸುರಕ್ಷಿತ ಸಾಮಾಜಿಕ ಪರಿಸರ, ಮಾಲಿನ್ಯರಹಿತ ವಾತಾವರಣ ಇತ್ಯಾದಿಗಳು. ಇವೆಲ್ಲವೂ ಸಂಸ್ಕೃತಿಯ ಪ್ರಮಾಣಗಳು. ನಿಶ್ಶ್ರೇಯಸವೇ ಪ್ರಧಾನ ವಾಗಿ ಅಭ್ಯುದಯವನ್ನು ಸಂಪೂರ್ಣ ಕಡೆಗಣಿಸಿದರೆ, ಆಗ ಸಮಾಜ ಒಟ್ಟಾರೆ ಹೆಚ್ಚುಕಾಲ ಉಳಿಯಲಾರದು, ಏಕೆಂದರೆ ಸಾಕಷ್ಟು ಭೌತಿಕ ಉನ್ನತಿ ಇಲ್ಲದೆ ಸಂಸ್ಕೃತಿಯನ್ನೂ ಉಳಿಸಿಕೊಳ್ಳ ಲಾಗುವುದಿಲ್ಲ. ಇವೆರಡರ ಪ್ರಗತಿಯಲ್ಲಿ ಸಮತೋಲನವಿರಬೇಕು ಮತ್ತು ಇವೆರಡೂ ಪರಸ್ಪರ ಪೂರಕವಾಗಿರಬೇಕು.

ಶಿಕ್ಷಣದ ಹಂತದಲ್ಲಿ ಜ್ಞಾನಾರ್ಜನೆ ಮತ್ತು ಕಾರ್ಯಕುಶಲತೆ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಆದರೆ ಇದರ ಜೊತೆಗೆ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿತ್ವದ ಬೆಳವಣಿಗೆಯೂ ಆಗಬೇಕು. ಅದಿಲ್ಲದಿದ್ದರೆ ಪಡೆದ ಜ್ಞಾನ ಮತ್ತು ಕೌಶಲಗಳನ್ನು ಸರಿಯಾದ ರೀತಿಯಲ್ಲಿ, ತನಗೂ, ಸಮಾಜಕ್ಕೂ ಉಪಯುಕ್ತವಾಗುವಂತೆ ಬಳಸಿಕೊಳ್ಳಲಾಗುವುದಿಲ್ಲ. ಒಂದು ಮಾರಕ ಅಸ್ತ್ರ ಅನಾಗರಿಕ ಕ್ರೂರ ವ್ಯಕ್ತಿಗೆ ಸಿಕ್ಕಿದರೆ ಅವನು ಅದನ್ನು ಕೇವಲ ನಾಶಕ್ಕಾಗಿಯೇ ಉಪಯೋಗಿಸುತ್ತಾನೆ. ಆದರೆ ಅದೇ ಅಸ್ತ್ರವನ್ನು ಸಾಮಾಜಿಕ ಜವಾಬ್ದಾರಿಯುಳ್ಳ ವ್ಯಕ್ತಿಯು ರಚನಾತ್ಮಕವಾಗಿ ಉಪಯೋಗಿಸಬಲ್ಲ. ಇದು ಜ್ಞಾನಕ್ಕೂ ಅನ್ವಯಿಸುತ್ತದೆ. ಜ್ಞಾನವು ಒಂದು ಶಕ್ತಿ. ಆ ಶಕ್ತಿಯನ್ನು ಪಡೆಯುವುದು ನಾಗರಿಕತೆಯಾದರೆ, ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬಲ್ಲ ವ್ಯಕ್ತಿತ್ವವನ್ನು ಪಡೆಯುವುದು ಸಂಸ್ಕೃತಿ. ಈ ಸಂಸ್ಕೃತಿ ಇಲ್ಲದಿದ್ದರೆ, ಭಸ್ಮಾಸುರನಂತೆ ವ್ಯಕ್ತಿಯು ಜ್ಞಾನವನ್ನು ವಿನಾಶಕ್ಕಾಗಿ, ಕೊನೆಗೆ ತನ್ನ ನಾಶಕ್ಕಾಗಿಯೂ, ಉಪಯೋಗಿಸುತ್ತಾನೆ.

**ಸಂಸ್ಕೃತಿಯು ಕೇವಲ ಪಾಂಡಿತ್ಯವಲ್ಲ;**
**ಅದು ವಿವೇಚನೆ, ಜೀವನದ ಪರಿಜ್ಞಾನ.**

—ಡಾ.ಎಸ್. ರಾಧಾಕೃಷ್ಣನ್

ಸಂಸ್ಕೃತಿಯ ಬೆಳವಣಿಗೆ ಇಲ್ಲದೆ ಕೇವಲ ಜ್ಞಾನಾರ್ಜನೆಯಿಂದ ಉಂಟಾಗುವ ಅಪಾಯವನ್ನು ಕುರಿತು ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಸಂಸ್ಕೃತಿಯು ಮಾತ್ರ ಆಘಾತವನ್ನು ಎದುರಿಸಬಲ್ಲದು, ಕೇವಲ ಜ್ಞಾನದ ರಾಶಿಯಲ್ಲ... ನಾವಿಂದು ರಾಶಿ ರಾಶಿ ಜ್ಞಾನವನ್ನು ಪಡೆದಿರುವ ದೇಶಗಳ ಬಗ್ಗೆ ತಿಳಿದಿರುವೆವು. ಅದರಿಂದೇನಾದಂತಾಯಿತು? ಅವುಗಳು ಹುಲಿ ಗಳಂತೆ, ಅವುಗಳು ಬರ್ಬರ, ರಾಕ್ಷಸ ಜನಾಂಗಗಳು, ಏಕೆಂದರೆ ಅವರಲ್ಲಿ ಸಂಸ್ಕೃತಿಯಿಲ್ಲ. ಜ್ಞಾನವು ಕೇವಲ ಚರ್ಮದ ಆಳ, ನಾಗರಿಕತೆಯಂತೆಯೇ. ಸ್ವಲ್ಪ ಕೆರೆದರೆ ಸಾಕು. ಹಳೆಯ ರಾಕ್ಷಸವೃತ್ತಿ ಹೊರಬರುತ್ತದೆ. ಜನಸಾಮಾನ್ಯರಿಗೆ ಅಕ್ಷರವನ್ನು ಕಲಿಸಿ, ಜ್ಞಾನವನ್ನು ನೀಡಿ, ಅವರು ಮಾಹಿತಿಯನ್ನು ಪಡೆಯು ತ್ತಾರೆ. ಆದರೆ ಇಷ್ಟೇ ಸಾಲದು, ಅವರಿಗೆ ಸಂಸ್ಕೃತಿಯನ್ನು ನೀಡ ಬೇಕು. ಅದನ್ನು ನೀವು ಕೊಡದಿದ್ದರೆ ಜನಸಾಮಾನ್ಯರ ಉನ್ನತಿ ಶಾಶ್ವತವಾಗಿ ಉಳಿಯುವುದಿಲ್ಲ." (ಕೃತಿಶ್ರೇಣಿ, ೩.೧೭೪)

ಪಿ.ಡಿ. ಔಸ್ಪೆಂಸ್ಕಿ ಹೇಳುತ್ತಾರೆ: "ಮಾನವನ ಬೆಳವಣಿಗೆ ಎರಡು ರೇಖೆಗಳಲ್ಲಿ ಮುಂದುವರಿಯುತ್ತದೆ : ಜ್ಞಾನರೇಖೆ ಮತ್ತು ಸ್ಥಿತಿ ರೇಖೆ. ಜ್ಞಾನವು ಸ್ಥಿತಿಯನ್ನು ಮೀರಿದರೆ, ಮನುಷ್ಯನಿಗೆ ಎಲ್ಲ ಗೊತ್ತಿರುತ್ತದೆ, ಆದರೆ ಏನೂ ಮಾಡುವ ಶಕ್ತಿ ಇರುವುದಿಲ್ಲ.

ಅಂಥ ಜ್ಞಾನ ವ್ಯರ್ಥ. ಇದರ ಬದಲು, ಸ್ಥಿತಿಯು ಜ್ಞಾನವನ್ನು ಮೀರಿಹೋದರೆ, ಆಗ ಮನುಷ್ಯನಿಗೆ ಮಾಡುವ ಶಕ್ತಿ ಇರುತ್ತದೆ, ಆದರೆ ಏನೂ ಗೊತ್ತಿರುವುದಿಲ್ಲ—ಅವನು ಏನೋ ಮಾಡಬಲ್ಲ, ಆದರೆ ಏನು ಮಾಡಬೇಕೆಂಬುದು ತಿಳಿಯದು." (*In Search of Miraculous*, ಪು. 66)

ನೈತಿಕತೆಯಲ್ಲಿ ಎರಡು ಮುಖಗಳಿವೆ: ಒಂದು ಕ್ರಿಯಾತ್ಮಕವಾದುದು, ಇನ್ನೊಂದು ಭಾವಾತ್ಮಕವಾದುದು. ಒಂದು ನಾಗರಿಕತೆಗೆ ಸಂಬಂಧಿಸಿದುದು, ಇನ್ನೊಂದು ಸಂಸ್ಕೃತಿಗೆ ಸಂಬಂಧಿಸಿದುದು. ಎಲ್ಲ ರೂಢಿಮೂಲವಾದ ನೈತಿಕ ಆದರ್ಶಗಳು ಮತ್ತು ವರ್ಣಾಶ್ರಮ ಧರ್ಮಗಳು ಮೊದಲನೆಯ ವರ್ಗಕ್ಕೆ ಸೇರುತ್ತವೆ. ಭಾವಾತ್ಮಕ ನೈತಿಕತೆಯೆಂದರೆ ಆಂತರಿಕ ನೈತಿಕಶಿಸ್ತು. ಇದು ವ್ಯಕ್ತಿಯ ಆಧ್ಯಾತ್ಮಿಕ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ವ್ಯಕ್ತಿಯು ಬಾಹ್ಯವಾಗಿ ಸಾಮಾಜಿಕ ಒತ್ತಡಗಳಿಂದಾಗಿ ನೀತಿಬದ್ಧ ಜೀವನ ನಡೆಸಬಹುದು, ಆದರೆ ಆಂತರಿಕವಾಗಿ ಅನೈತಿಕ ಭಾವದಿಂದ ತುಂಬಿರಬಹುದು. ಬಾಹ್ಯದಲ್ಲಿ ನಾವು ನೈತಿಕವಾಗಿ ವರ್ತಿಸುವುದಕ್ಕಿಂತ ಆಂತರಿಕವಾಗಿ ನಾವು ಎಷ್ಟು ನೀತಿವಂತರಾಗಿರುವೆವು ಎಂಬುದು ಮುಖ್ಯ. ಆದ್ದರಿಂದ ಕೇವಲ ರೂಢಿಮೂಲವಾದ ಬಾಹ್ಯ ನೈತಿಕತೆ ಸಾಲದು. ಅದನ್ನು ಆಂತರಿಕ ನೈತಿಕ ಸಂಸ್ಕೃತಿಯಿಂದ ಬಲಪಡಿಸದಿದ್ದರೆ ಅದು ಅಸ್ಥಿರವಾಗುತ್ತದೆ, ಮತ್ತು ಯಾವುದೇ ಸಾಮಾಜಿಕ ವಿಪ್ಲವವು ನೈತಿಕ ಅವನತಿಗೆ, ಅರಾಜಕತೆಗೆ ಕಾರಣವಾಗುತ್ತದೆ. ನಿಜವಾದ ನೈತಿಕತೆ ಆಂತರಿಕವಾದುದು ಮತ್ತು ಅದು ಆಧ್ಯಾತ್ಮಿಕ ತಳಹದಿಯನ್ನು ಹೊಂದಿದ್ದರೆ ಸ್ಥಿರವಾಗಿ ಉಳಿಯುತ್ತದೆ. ಹಿಂಸಿಸದಿರುವುದಕ್ಕಿಂತ ದ್ವೇಷಿಸದಿರುವುದು ಮುಖ್ಯ; ಸುಳ್ಳು ಹೇಳದೇ ಇರುವುದಕ್ಕಿಂತ ಆಂತರಿಕ ಸತ್ಯನಿಷ್ಠೆ ಮುಖ್ಯ; ಕದಿಯದೇ ಇರುವುದಕ್ಕಿಂತ ಇತರರ ವಸ್ತುವಿಗೆ ಆಸೆಪಡದಿರುವುದು ಮುಖ್ಯ; ಬಾಹ್ಯೇಂದ್ರಿಯ ನಿಗ್ರಹಕ್ಕಿಂತ ಆಂತರಿಕ ಪರಿವರ್ತನೆ ಮುಖ್ಯ.

> ■ ಒಳ್ಳೆಯದಾಗಿ ವರ್ತಿಸುವುದು ನಾಗರಿಕತೆ; ಒಳ್ಳೆಯ ಭಾವನೆ ತಾಳುವುದು ಸಂಸ್ಕೃತಿ. ■

ಧಾರ್ಮಿಕ ದೃಷ್ಟಿಯಿಂದ ನೋಡಿದರೆ, ಸಂಸ್ಕೃತಿ ಎಂದರೆ ಆಂತರಿಕ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಬಾಹ್ಯ ಆಚಾರಗಳು, ಮತತತ್ತ್ವಗಳು, ಶಾಸ್ತ್ರ, ಉತ್ಸವ ಇತ್ಯಾದಿಗಳು ನಾಗರಿಕತೆಯ ರೂಪಗಳು. ಧರ್ಮದ ನಾಗರಿಕ ಅಂಶದ್ದೇ ಮೇಲುಗೈಯಾದರೆ ಅದರ ಸಾಂಸ್ಕೃತಿಕ ಅಂಶ ನಲುಗುತ್ತದೆ. ಸಾಮಾನ್ಯವಾಗಿ ಆಧ್ಯಾತ್ಮಿಕ ಆದರ್ಶವನ್ನು ಪರಿಣಾಮಕಾರಿಯಾಗಿ ಅನುಸರಿಸಲು ಜನರಿಗೆ ಸಾಧ್ಯವಾಗದಾಗ ಅವರು ಧರ್ಮದ ಬಾಹ್ಯಾಚರಣೆಗಳಿಗೆ ಶರಣು ಹೋಗುತ್ತಾರೆ—ಆಂತರಿಕ ಶೂನ್ಯತೆಯನ್ನು ಬಾಹ್ಯಾಡಂಬರಗಳಿಂದ ತುಂಬಲು ಪ್ರಯತ್ನಿಸುತ್ತಾರೆ. ಧಾರ್ಮಿಕ ಆಚರಣೆಗಳು ಜನಸಾಮಾನ್ಯರನ್ನು ನೈತಿಕ ನಿಯಂತ್ರಣದಲ್ಲಿ ಇರಿಸಲೂ ಸಹಾಯಕವಾಗುತ್ತದೆ. ಲಾವೋತ್ಸೆಯ ಈ ಕೆಳಗಿನ ಹೇಳಿಕೆ ಬಹುಶಃ ಇದನ್ನೇ ಸಮರ್ಥಿಸುತ್ತದೆ: "ಸ್ವಾಭಾವಿಕ ಸಮನ್ವಯವು ನಷ್ಟವಾದಾಗ ನೀತಿ ನಿಯಮಗಳು ಜಾರಿಗೆ ಬರುತ್ತವೆ, ನೀತಿ ನಿಯಮಗಳೂ ದುರ್ಬಲವಾದಾಗ ನ್ಯಾಯ ತಲೆದೋರುತ್ತದೆ, ಮತ್ತು ನ್ಯಾಯವೂ ಕೆಲಸಮಾಡದಾದಾಗ ಧಾರ್ಮಿಕ ಆಚರಣೆಗಳು ತಲೆಯೆತ್ತುತ್ತವೆ."

ಸಂಸ್ಕೃತಿ ಮತ್ತು ನಾಗರಿಕತೆಗಳು ಪರ್ಯಾಯವಾಗಿ ಪ್ರವೃದ್ಧ ಮಾನಕ್ಕೆ ಬರುವುದನ್ನು ಮಾನವವಿಕಾಸದ ಇತಿಹಾಸದಲ್ಲಿ ನಾವು ಗುರುತಿಸಬಹುದು. ಕಾಡಿನಲ್ಲಿ ವಾಸಿಸುತ್ತಿದ್ದ ಆದಿಮಾನವನು ತನ್ನ ಜೀವನೋಪಾಯಕ್ಕಾಗಿ ಬೇಟೆಯನ್ನೇ ಅವಲಂಬಿಸಿದ್ದ. ಉನ್ನತ ಸಾಂಸ್ಕೃತಿಕ ಆಯಾಮಗಳ ಕಡೆ ಗಮನ ಹರಿಸಲು ಅವನಿಗೆ ಅವಕಾಶವೇ ಇರಲಿಲ್ಲ. ಅವನ ಗಮನವೆಲ್ಲ ಪಡೆಯುವುದರ ಕಡೆಗೇ, ಬೆಳವಣಿಗೆಯ ಕಡೆಗಲ್ಲ. ಇದು ಒಂದು ರೀತಿಯಲ್ಲಿ ಆದಿಮಾನವನ ನಾಗರಿಕತೆಯನ್ನು ಪ್ರತಿನಿಧಿಸುತ್ತದೆ. ಅನಂತರ ಬೇಸಾಯದ ಯುಗ ಪ್ರಾರಂಭವಾಯಿತು. ಈ ಕಾಲದಲ್ಲಿ ಮಾನವ ಕೇವಲ ಸಂಗ್ರಹಿಸುವುದು ಮಾತ್ರವಲ್ಲದೆ ತಾನು ಬೆಳೆಯುವ ಅವಕಾಶವನ್ನು ಪಡೆಯುತ್ತಾನೆ. ಅವನು ಕೇವಲ ಭೌತಿಕ ಅಸ್ತಿತ್ವವನ್ನು ಮೀರಿ ಮಾನಸಿಕವಾಗಿ ಬೆಳೆಯುತ್ತಾನೆ. ಇದರ ಮೂಲಕ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ಸಾಹಿತ್ಯ, ಧರ್ಮ ಮುಂತಾದ ಸಾಂಸ್ಕೃತಿಕ ಬೆಳವಣಿಗೆ ಸಾಧ್ಯವಾಯಿತು. ಈ ಯುಗದಲ್ಲಿ ಮಾನವನು ಸಂಸ್ಕೃತಿಯ ಉತ್ತುಂಗ ಶಿಖರವನ್ನು ಮುಟ್ಟಿದನು. ಈ ಕಾಲದಲ್ಲಿಯೇ ಅನೇಕ ನೈತಿಕ, ಧಾರ್ಮಿಕ ಮತ್ತು ತಾತ್ತ್ವಿಕ ಸಿದ್ಧಾಂತಗಳು ತಲೆದೋರಿದವು. ಆದ್ದರಿಂದ ಈ ಯುಗದಲ್ಲಿ ಸಂಸ್ಕೃತಿಯು ನಾಗರಿಕತೆಯನ್ನು ಮೀರಿ ಅತ್ಯಂತ ಪ್ರಗತಿಯನ್ನು ಸಾಧಿಸಿತು ಎನ್ನಬಹುದು.

ಆದರೆ ಇಂದಿನ ಕೈಗಾರಿಕೆ ಮತ್ತು ತಾಂತ್ರಿಕ ಯುಗದಲ್ಲಿ ನಾಗರಿಕತೆಯದೇ ರಾಜ್ಯಭಾರ, ಅದು ಸಂಸ್ಕೃತಿಯನ್ನು ಮೆಟ್ಟಿ ಪರಾಭವಗೊಳಿಸಿ ತನ್ನ ಪ್ರಭುತ್ವವನ್ನು ಸಾಧಿಸುತ್ತಿದೆ. ಇಂದಿನ ಈ ತಾಂತ್ರಿಕ ಯುಗದಲ್ಲಿ ಉತ್ಪಾದಿಸುವುದು ಮತ್ತು ಭೋಗಿಸುವುದು, ಗಳಿಸುವುದು ಮತ್ತು ಕಬಳಿಸುವುದು—ಇವೇ ಪ್ರಧಾನ ಲಕ್ಷಣವಾಗಿ ಕಂಡುಬರುತ್ತಿದೆ. ಆಸೆಗಳ ಹೆಚ್ಚಳವೇ ಆರ್ಥಿಕ ಪ್ರಗತಿಯ ಆಧಾರವಾಗಿದೆ. ಇದಕ್ಕನುಗುಣವಾಗಿಯೇ ಎಲ್ಲ ಮಾಧ್ಯಮಗಳೂ ಜಾಹಿರಾತುಗಳೂ ಕೆಲಸಮಾಡುತ್ತಿವೆ. ವ್ಯಕ್ತಿಗಿಂತ ವಸ್ತುವೇ ಪ್ರಧಾನವಾಗುತ್ತಿದೆ, ವಸ್ತುವಿನ ಬೆಳವಣಿಗೆಯಲ್ಲಿ ವ್ಯಕ್ತಿಯ ಬೆಳವಣಿಗೆ ಕುಂಠಿತವಾಗುತ್ತಿದೆ. ಉಪಯುಕ್ತ ವಸ್ತುಗಳ ಉತ್ಪಾದನೆಗೆ ನೀಡಲಾಗುತ್ತಿರುವ ಅತಿಯಾದ ಪ್ರಾಧಾನ್ಯ, ಸೌಲಭ್ಯ ಮತ್ತು ವಿಲಾಸವಸ್ತುಗಳ ಅತಿಯಾದ ಹೆಚ್ಚಳ ಮತ್ತು ಈ ಯಂತ್ರಪ್ರಧಾನ ಜೀವನ—ಇವು ವ್ಯಕ್ತಿಯ ಸಾಂಸ್ಕೃತಿಕ ಬೆಳವಣಿಗೆಗೆ ಮಾರಕವಾಗುವುದರಲ್ಲಿ ಸಂಶಯವಿಲ್ಲ. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಸಿ.ಜಿ. ಯೂಂಗ್ ಹೇಳುತ್ತಾರೆ: "ಮಹತ್ತರ ಸಾಧನೆಗಳು, ಉಪಯುಕ್ತತೆ ಇವೇ ಮುಂತಾದವುಗಳು ಅಸಂಖ್ಯ ಸಮಸ್ಯೆಗಳ ಗೊಂದಲದಿಂದ ಪಾರಾಗಲು ಸಹಾಯಕವಾಗುತ್ತವೆ

ಎಂದು ಕಂಡುಬರುತ್ತದೆ. ಆದರೆ ಇವು ಸಂಸ್ಕೃತಿ ಎಂದು ಕರೆಯಲ್ಪಡುವ ವಿಶಾಲ ಪ್ರಜ್ಞೆಯ ಬೆಳವಣಿಗೆಗೆ ಮಾರ್ಗದರ್ಶಕವಾಗುವುದಿಲ್ಲ. ಧನಾರ್ಜನೆ, ಸಾಮಾಜಿಕ ಅಸ್ತಿತ್ವ, ಕುಟುಂಬ, ಮುಂದಿನ ಪೀಳಿಗೆ—ಇವೆಲ್ಲ ಶುದ್ಧಾಂಗ ಪ್ರಾಕೃತಿಕವಾದುವುಗಳು, ಸಂಸ್ಕೃತಿಯಲ್ಲ. ಪ್ರಕೃತಿಯ ಉದ್ದೇಶವನ್ನು ಮೀರಿ ನಿಲ್ಲುವುದಾವುದೊ ಅದು ಸಂಸ್ಕೃತಿ."(*Modern Man in Search of a Soul*, ಪು.118-20)

**ಅನವಶ್ಯಕ ಆವಶ್ಯಕತೆಗಳ ಮಿತಿಮೀರಿದ ಹೆಚ್ಚಳವೇ ನಾಗರಿಕತೆ.** —ಮಾರ್ಕ್‌ಟ್ವೈನ್

ಈಗ ಮತ್ತೆ ಬದಲಾವಣೆ ಕಾಣಿಸಿಕೊಳ್ಳುತ್ತಿದೆ. ಮಿತಿಮೀರಿದ ನಾಗರಿಕತೆಯ ಬೆಳವಣಿಗೆಯ ನಂತರ ಈಗ ನಾವು ಸಂಸ್ಕೃತಿಯ ಕಡೆಗೆ ನಮ್ಮ ಗಮನವನ್ನು ತಿರುಗಿಸುತ್ತಿರುವಂತೆ ಕಂಡುಬರುತ್ತಿದೆ. ಹಿಂದೆ ವೈಜ್ಞಾನಿಕ ಸಂಶೋಧನೆಯು ಮುಖ್ಯವಾಗಿ ಭೌತಿಕ ವಿಜ್ಞಾನಗಳಿಗೆ ಕೇಂದ್ರೀಕೃತವಾಗಿತ್ತು. ಆದರೆ ಈಗ ಬಯೋ ಕೆಮಿಸ್ಟ್ರಿ, ನ್ಯೂರೋಲಜಿ, ಜೆನೆಟಿಕ್ ಇಂಜಿನಿಯರಿಂಗ್ ಮುಂತಾದ ಜೀವ-ವಿಜ್ಞಾನಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಈಗ ಮನಶ್ಶಾಸ್ತ್ರವೂ ಹೆಚ್ಚು ಪ್ರಾಧಾನ್ಯ ಪಡೆಯುತ್ತಿದೆ. ವೈಯಕ್ತಿಕ ಸಮಸ್ಯೆಗಳಿಗೆ ಸಂಬಂಧಿಸಿದ ಮತ್ತು ವ್ಯಕ್ತಿಯ ಬೆಳವಣಿಗೆಯನ್ನು ಕುರಿತಾದ ಅನೇಕಾನೇಕ ಮನಶ್ಶಾಸ್ತ್ರೀಯ ಗ್ರಂಥಗಳು ಪ್ರಕಟವಾಗುತ್ತಿವೆ. ಪ್ರಜ್ಞೆಯ ಅಧ್ಯಯನ ಮತ್ತು ವ್ಯಕ್ತ್ಯಾತೀತ ಮನಶ್ಶಾಸ್ತ್ರ (Transpersonal Psychology) ಹೆಚ್ಚು ಹೆಚ್ಚು ಚಿಂತಕರ ಗಮನವನ್ನು ಸೆಳೆಯುತ್ತಿವೆ. ಧ್ಯಾನ, ಯೋಗ ಮುಂತಾದ ಆಧ್ಯಾತ್ಮಿಕ ಸಾಧನೆಗಳಲ್ಲಿ ಜನರ ಆಸಕ್ತಿ ಕೆರಳುತ್ತಿದೆ. ಇತ್ತೀಚೆಗಿನ *TIME* ಪತ್ರಿಕೆಯ ವರದಿಯ ಪ್ರಕಾರ, ೧೫ ಮಿಲಿಯನ್ ಅಮೆರಿಕನರು ಒಂದಲ್ಲ ಒಂದು ಬಗೆಯ ಯೋಗಾಭ್ಯಾಸವನ್ನು ಮಾಡುತ್ತಾರೆ, ಮತ್ತು ಅಮೆರಿಕದಲ್ಲಿ ಪ್ರತಿಶತ ೭೫ರಷ್ಟು ಆರೋಗ್ಯ ಕೇಂದ್ರಗಳಲ್ಲಿ (Health Clubs) ಯೋಗ ತರಗತಿಗಳಿವೆಯಂತೆ.

ಕೆನ್ ವಿಲ್ಬರ್, ಚಾರ್ಲ್ಸ್ ಟಾರ್ಟ್ ಮುಂತಾದ ವ್ಯಕ್ತ್ಯಾತೀತ ಮನಶ್ಶಾಸ್ತ್ರಜ್ಞರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ: "ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳುವ ಸಾಹಸದ ಹೊಸಮುಖವನ್ನು ನಾವು ಪ್ರವೇಶಿಸುತ್ತಿದ್ದೇವೆ. ಅಸಾಧಾರಣ ಆರೋಗ್ಯವಂತ ವ್ಯಕ್ತಿಗಳ ಅತ್ಯುಚ್ಚ ಅನುಭವಗಳನ್ನು (Peak experience) ತಿಳಿಯುವ ಪ್ರಯತ್ನದೊಂದಿಗೆ ಸಾಮಾನ್ಯರೀತಿಯಲ್ಲಿ ಪ್ರಾರಂಭಗೊಂಡ ವ್ಯಕ್ತ್ಯಾತೀತ ಮನಶ್ಶಾಸ್ತ್ರವು ಈಗ ಅಂತಾರಾಷ್ಟ್ರೀಯ, ಅಂತಶ್ಶಾಸ್ತ್ರೀಯ ಚಳುವಳಿಯಾಗಿ ಅರಳಿ ನಿಂತಿದೆ. ವ್ಯಕ್ತ್ಯಾತೀತ ಅನುಭವಗಳು ಶಕ್ತಿಗಳು ಮತ್ತು ಸಂಪ್ರದಾಯಗಳು ಹಲವು ವರ್ಷಗಳಿಂದ ಮಾನಸಿಕ ದೌರ್ಬಲ್ಯಗಳೆಂದೂ ಕಟ್ಟುಕಥೆಗಳೆಂದೂ ತಿರಸ್ಕರಿಸಲ್ಪಡುತ್ತಿದ್ದವು. ಆದರೆ ಈಗ ಅವು ಗಂಭೀರ ಸಂಶೋಧನೆಗೆ ಒಳಪಡುತ್ತಿದ್ದು ಆದರಣೀಯವಾಗಿವೆ. ಪ್ರತಿಯೊಂದು ಆವಿಷ್ಕಾರವೂ ಹೊಸ ಸಾಧ್ಯತೆಗಳನ್ನು ಅನಾವರಣಗೊಳಿಸುತ್ತಿದೆ." ಅವರು ಮುಂದುವರಿದು ಹೇಳುತ್ತಾರೆ, "ಪಶ್ಚಿಮಕ್ಕೆ ಧ್ಯಾನವನ್ನು ಪರಿಚಯಿಸಿರುವುದು ಅಥವಾ ಪುನಃ ಪರಿಚಯಿಸಿರುವುದು ಇಪ್ಪತ್ತನೇ ಶತಮಾನದ ಅತ್ಯಂತ ವಿಶಿಷ್ಟ ಘಟನೆಗಳಲ್ಲಿ ಒಂದಾಗಿ ಪರಿಣಮಿಸಬಹುದು." (*Paths Beyond Ego*, ಪು, *566*, ಪು. *54*).

ಸಂಸ್ಕೃತಿ ಮತ್ತು ನಾಗರಿಕತೆಗಳ ಸಮನ್ವಯ ರೂಪದ ಬೆಳವಣಿಗೆ ಈಗ ಮುಖ್ಯವಾಗಿ ಬೇಕಾಗಿರುವುದು. ನಾಗರಿಕತೆಯನ್ನು ಕಡೆಗಣಿಸಿ ಕೇವಲ ಸಂಸ್ಕೃತಿಯ ಬೆಳವಣಿಗೆಯಾದರೆ ಕ್ರಮೇಣ ಸಮಾಜವು ದುರ್ಬಲವಾಗುತ್ತದೆ ಮತ್ತು ಇದರಿಂದ ಸಂಸ್ಕೃತಿಯ ಬೆಳವಣಿಗೆಯೂ ಸ್ಥಗಿತವಾಗುತ್ತದೆ. ಹಾಗೆಯೇ ಅಡೆತಡೆಯಿಲ್ಲದ ನಾಗರಿಕತೆಯ ಬೆಳವಣಿಗೆ ಸಂಸ್ಕೃತಿಯ ಬೆಳವಣಿಗೆಯನ್ನು ಕುಂಠಿತಗೊಳಿಸಿ ಮನುಷ್ಯ ತನ್ನ ಅಸ್ತಿತ್ವದ ನೆಲೆಯನ್ನೇ ಕಳೆದುಕೊಳ್ಳುವಂತಾಗುತ್ತದೆ. ಮಾನವ ಮತ್ತು ಸಮಾಜದ ಸಮಗ್ರ ಬೆಳವಣಿಗೆ ಸಾಧ್ಯವಾಗುವುದು ಇವೆರಡಕ್ಕೂ ಸಮಾನ ಪ್ರಾಮುಖ್ಯವನ್ನು ನೀಡಿದಾಗ. ವೈಶೇಷಿಕ ದರ್ಶನದ ಮೂಲಪುರುಷನಾದ ಗೌತಮನು ಧರ್ಮದ ಲಕ್ಷಣವನ್ನು ಹೀಗೆ ಹೇಳುತ್ತಾನೆ: **ಯತಃ ಅಭ್ಯುದಯ ನಿಶ್ಶ್ರೇಯಸ ಸಿದ್ಧಿಃ ಸ ಧರ್ಮಃ**—"ಯಾವುದರ ಮೂಲಕ ಅಭ್ಯುದಯ ನಿಶ್ಶ್ರೇಯಸಗಳೆರಡೂ ಉಂಟಾಗುತ್ತವೊ ಅದು ಧರ್ಮ." ಇಲ್ಲಿ ಅಭ್ಯುದಯ ಮತ್ತು ನಿಶ್ಶ್ರೇಯಸಗಳನ್ನು ಕ್ರಮವಾಗಿ ನಾಗರಿಕತೆ ಮತ್ತು ಸಂಸ್ಕೃತಿ ಎಂದು ಕರೆಯಬಹುದು.

ಸ್ವಾಮಿ ವಿವೇಕಾನಂದರ ಆದರ್ಶವೂ ಇದೇ ಆಗಿತ್ತು. "ಪಾಶ್ಚಾತ್ಯ ಸಂಘಟನಾ ಕ್ರಮ, ಅವರ ಬಾಹ್ಯ ನಾಗರಿಕತೆ ಹೇಗೆ ನಮ್ಮ ಮೇಲೆ, ನಾವು ಇಚ್ಛಿಸಲಿ ಬಿಡಲಿ, ತಮ್ಮ ಪ್ರಭಾವವನ್ನು ಬೀರುತ್ತಿವೆಯೋ ಹಾಗೆಯೇ ಭರತಖಂಡದ ದರ್ಶನ ಮತ್ತು ಆಧ್ಯಾತ್ಮಿಕತೆ ಪಾಶ್ಚಾತ್ಯದೇಶಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಿವೆ. ಅದನ್ನು ಯಾರೂ ತಡೆಯಲಾರರು. ನಾವೂ ಕೂಡ ಪಾಶ್ಚಾತ್ಯ ಭೌತಿಕ ನಾಗರಿಕತೆಯ ಪ್ರಭಾವವನ್ನು ತಡೆಯಲಾಗುವುದಿಲ್ಲ. ಬಹುಶಃ ಸ್ವಲ್ಪ ಅವರ ನಾಗರಿಕತೆ ನಮಗೆ ಹಿತಕಾರಿ, ಸ್ವಲ್ಪ ಅಧ್ಯಾತ್ಮ ಅವರಿಗೆ ಹಿತಕಾರಿ. ಹೀಗೆ ಸಮತೋಲನವುಂಟಾಗುತ್ತದೆ." (**ಕೃತಿಶ್ರೇಣಿ**, ೩.೫೯) ಅವರು ಮುಂದುವರಿದು ಹೇಳುತ್ತಾರೆ: "ನಮ್ಮದೇ ಆಗಿರುವ ಅನೇಕ ಬಗೆಯ ಜ್ಞಾನದ ಶಾಖೆಗಳನ್ನೆಲ್ಲ ಪರದೇಶೀಯರ ಹತೋಟಿಯಿಂದ ವಿಮುಕ್ತರಾಗಿ ಕಲಿಯಬೇಕು. ಜೊತೆಗೆ ಆಂಗ್ಲಭಾಷೆ ಮತ್ತು ಪಾಶ್ಚಾತ್ಯ ವಿಜ್ಞಾನವನ್ನೂ ಕಲಿಯಬೇಕು. ಇದೇ ನಮಗೆ ಈಗ ಬೇಕಾಗಿರುವುದು. ನಮಗೆ ಕೈಗಾರಿಕಾಶಿಕ್ಷಣ ಆವಶ್ಯಕ ಮತ್ತು ಯಾವುದರಿಂದ ಕೈಗಾರಿಕೆಗಳ ಬೆಳವಣಿಗೆಯಾಗುವುದೊ ಯಾವುದರಿಂದ ಜನರು ಉದ್ಯೋಗವನ್ನು ಹುಡುಕಿಕೊಂಡು ಅಲೆಯುವುದರ ಬದಲು ತಮಗೆ ಸಾಕಾಗುವಷ್ಟನ್ನು ಮತ್ತು ಕಷ್ಟಕಾಲಕ್ಕೆ ಸ್ವಲ್ಪ ಉಳಿಸುವಷ್ಟನ್ನು ಸಂಪಾದಿಸಬಹುದೊ ಅಂತಹ ಶಿಕ್ಷಣ ಆವಶ್ಯಕ." (**ಕೃತಿಶ್ರೇಣಿ**, ೮. ೨೮೧)

ಈಶಾವಾಸ್ಯ ಉಪನಿಷತ್ತಿನ, ತುಂಬ ನಿಗೂಢವಾದ ಅರ್ಥವುಳ್ಳ ಈ ಕೆಳಗಿನ ಮಂತ್ರವನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು:

**ಹಸಿದಾಗ ಊಟ ಮಾಡುವುದು *ಪ್ರಕೃತಿ*, ಹಸಿವಾಗದಿದ್ದರೂ ಊಟಮಾಡುವುದು *ವಿಕೃತಿ*, ಹಸಿದವನಿಗೆ ಅಶನವೀಯುವ ಸಲುವಾಗಿ ತಾನು ಉಪವಾಸವಿರುವುದು *ಸಂಸ್ಕೃತಿ*. — ವಿನೋಬಾ ಭಾವೆ.**

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

"ಯಾವನು ವಿದ್ಯೆ ಮತ್ತು ಅವಿದ್ಯೆ ಇವೆರಡನ್ನೂ ಒಟ್ಟಿಗೆ ಅರಿಯುತ್ತಾನೋ ಅವನು ಅವಿದ್ಯೆಯ ಮೂಲಕ ಮೃತ್ಯುವನ್ನು ದಾಟಿ, ವಿದ್ಯೆಯ ಮೂಲಕ ಅಮೃತತ್ವವನ್ನು ಪಡೆಯುತ್ತಾನೆ."

ಇಲ್ಲಿ ಅವಿದ್ಯೆ ಎಂದರೆ ಭೌತಿಕ ಅಭಿವೃದ್ಧಿ. ಇದಿಲ್ಲದೆ ವಿದ್ಯೆಯನ್ನು, ಎಂದರೆ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಸಾಧಿಸಲಾಗುವುದಿಲ್ಲ. ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗಾಗಿ ಮತ್ತು ಸಾಮಾಜಿಕ ಉನ್ನತಿಗಾಗಿ ಇವೆರಡನ್ನೂ ಸಮಾನವಾಗಿ ಅನುಸರಿಸಬೇಕೆಂದು ಉಪನಿಷತ್ತು ಉಪದೇಶಿಸುತ್ತದೆ. ಹೀಗೆ ಸಂಸ್ಕೃತಿ ಮತ್ತು ನಾಗರಿಕತೆ ಇವೆರಡೂ ಸಮಾನವಾಗಿ ಮುಂದುವರೆಯಬೇಕು, ಒಂದನ್ನೊಂದು ಹಿಂದೆ ತಳ್ಳಿ ಮುನ್ನುಗ್ಗಬಾರದು. ಒಂದನ್ನೊಂದು ನಿಗ್ರಹಿಸುತ್ತ ಪರಸ್ಪರ ಪೂರಕವಾಗಿ ಮುಂದುವರೆಯಬೇಕು. ಸಮಾಜವು ಇವೆರಡರ ಸಮನ್ವಯ ಸ್ಥಿತಿಯನ್ನು ಮುಟ್ಟಿದಾಗ ಅದನ್ನು ಸತ್ಯಯುಗ ಎಂದು ಕರೆಯಬಹುದು.

◆

## ಪ್ರಹಸನ ಪ್ರಸಂಗ

ನಿಷ್ಠಾವಂತ, ಧರ್ಮಭೀರು ಕ್ರೈಸ್ತನೊಬ್ಬನು ಮರಣಶಯ್ಯೆಯಲ್ಲಿ ಮಲಗಿದ್ದನು. ಅವನ ಹತ್ತಿರ ಕ್ರೈಸ್ತಪಾದ್ರಿ, ವೈದ್ಯ ಮತ್ತು ವಕೀಲ ನಿಂತಿದ್ದರು. ಕ್ರೈಸ್ತನು ದೇಹತ್ಯಾಗಕ್ಕೆ ಮುಂಚೆ ಆ ಮೂವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು, ಅವರನ್ನು ಉದ್ದೇಶಿಸಿ ಹೇಳಿದನು:

"ಈ ಒಂದು ಲಕ್ಷ ರೂಪಾಯಿ ನನ್ನ ಮರಣಾನಂತರದ ಪ್ರಯಾಣದ ಖರ್ಚಿಗಾಗಿ. ನಾನು ಸತ್ತನಂತರ ನನ್ನ ಶವಪೆಟ್ಟಿಗೆಯ ಒಳಗೆ ಇದನ್ನು ಇಟ್ಟು, ಹೂಳಬೇಕು. ದಯವಿಟ್ಟು ನನ್ನ ಈ ಕೊನೆಯಾಸೆಯನ್ನು ತೀರಿಸಿಬಿಡಿ."

"ಆಗಲಿ, ಆಗಲಿ, ನೀವು ನಿಶ್ಚಿಂತೆಯಿಂದಿರಿ. ನೀವು ಹೇಳಿದಂತೆಯೇ ಮಾಡುತ್ತೇವೆ. ನಿಮ್ಮ ಪ್ರಯಾಣ ಸುಗಮವಾಗಲಿ"—ಎಂದರು ಆ ಮೂವರು. ಕ್ರೈಸ್ತನು ನಿಶ್ಚಿಂತೆಯಿಂದ ಪ್ರಾಣ ಬಿಟ್ಟನು.

ಪಾದ್ರಿಯು ಆ ಒಂದು ಲಕ್ಷ ರೂಗಳಲ್ಲಿ ತನ್ನ ಧಾರ್ಮಿಕ ವಿಧಿಗಳ ಶುಲ್ಕವಾಗಿ ೨೫,೦೦೦ ರೂಗಳನ್ನು ತೆಗೆದುಕೊಂಡನು. ವೈದ್ಯನು ತನ್ನ ಚಿಕಿತ್ಸಾಶುಲ್ಕವೆಂದು ಮತ್ತೆ ೨೫,೦೦೦ ರೂಪಾಯಿಗಳನ್ನು ತೆಗೆದುಕೊಂಡನು. ಇದನ್ನೆಲ್ಲ ನೋಡುತ್ತಿದ್ದ ವಕೀಲನು ಹೇಳಿದ:

"ನೀವು ಎಂಥ ಜನ! ಈಗ ತಾನೆ ಅವನಿಗೆ ಮಾತುಕೊಟ್ಟು ಈಗ ವಚನಭ್ರಷ್ಟರಾಗುತ್ತಿದ್ದೀರಲ್ಲ. ಪಾಪ ಆ ಸತ್ತವನ ಗತಿಯೇನು? ಅವನ ಮರಣೋತ್ತರ ಜೀವನದ ಪಾಡೇನು? ಅವನನ್ನು ಯಾರು ನೋಡಿಕೊಳ್ಳುತ್ತಾರೆ? ಆಗಲಿ, ನಾನಂತೂ ಈ ರೀತಿ ವಂಚಿಸಲು ಇಷ್ಟಪಡುವುದಿಲ್ಲ. ನಿಮ್ಮ ಪಾಲಿನ ಹಣವನ್ನೂ ನಾನು ಕೊಟ್ಟುಬಿಡುತ್ತೇನೆ" ಎಂದು ಒಂದು ಲಕ್ಷ ರೂ.ಗಳಿಗೆ ಒಂದು ಚೆಕ್ಕನ್ನು ಬರೆದು ಶವಪೆಟ್ಟಿಗೆಯಲ್ಲಿಟ್ಟನು!

ಈ ಬ್ಯಾಂಕಿನ ಚೆಕ್ ಆ ಬ್ಯಾಂಕಿನಲ್ಲಿ ಕ್ಯಾಷ್ ಆಗುವುದಿಲ್ಲ. ಈ ವ್ಯಾವಹಾರಿಕ ಜಾಣತನವೆಲ್ಲ ಅಲ್ಲಿ ನಡೆಯುವುದಿಲ್ಲ. ಅಲ್ಲಿ ಆ ಪಾರಮಾರ್ಥಿಕ ಜಗತ್ತಿನಲ್ಲಿ ಪ್ರಾಮಾಣಿಕ ಭಕ್ತಿಯೊಂದೇ ಕ್ಯಾಷ್ ಆಗಬಲ್ಲದು. ನಾವು ಭಕ್ತಿಯ ಚೆಕ್ ಕೊಟ್ಟರೆ ಆನಂದ ರೂಪದ ಕ್ಯಾಷ್ ಝಣಝಣಿಸುತ್ತ ಬರುತ್ತದೆ.

✩ ✩ ✩

ವಾಸ್ತವ ಜಗತ್ತಿಗಿಂತ ಅವಾಸ್ತವ ಸ್ವರ್ಗನರಕಗಳ ಕಲ್ಪನೆಗಳು ನಮ್ಮ ಮಾನಸಿಕ ಕ್ಷೇತ್ರದಲ್ಲಿ ಬಲವಾಗಿ ಬೇರುಬಿಟ್ಟಿರುತ್ತವೆ. ಚಿಕ್ಕ ಮಕ್ಕಳಿಗೂ ಅಂತಹ ಕಲ್ಪನೆಗಳು ಸ್ವಾಭಾವಿಕವಾಗಿರುತ್ತವೆ. ವಾಸ್ತವಸ್ಥಿತಿಯಲ್ಲಿ ನಾವು ಮೊದಲು ನೆಲೆನಿಲ್ಲುವುದನ್ನು ಕಲಿಯಬೇಕು. ಅನಂತರವೇ ಅತೀತವನ್ನು ತಲುಪಲು ಸಾಧ್ಯ. ಅವಾಸ್ತವದಿಂದ ವಾಸ್ತವತೆಗೆ ಬಂದು, ಅಲ್ಲಿಂದ ಅತೀತಕ್ಕೆ ನಾವು ಪಯಣಿಸಬೇಕು.

ಒಂದು ಚಿಕ್ಕ ಹುಡುಗಿಗೆ ತಿಮಿಂಗಿಲದ ಬಗ್ಗೆ ವಿವರಿಸುತ್ತ ಉಪಾಧ್ಯಾಯರು, ತಿಮಿಂಗಿಲವು ತುಂಬ ದೊಡ್ಡ ಪ್ರಾಣಿಯಾದರೂ ಅದರ ಗಂಟಲು ಚಿಕ್ಕದಾಗಿರುವುದರಿಂದ ಮನುಷ್ಯನನ್ನು ತಿನ್ನಲಾರದು ಎಂದು ಹೇಳಿದರು. "ನನ್ನ ಸಹೋದರ ಜೋನಾನನ್ನು ತಿಮಿಂಗಿಲ ತಿಂದಿತು" ಎಂದು ಚಿಕ್ಕ ಹುಡುಗಿ ಹೇಳಿತು. ಉಪಾಧ್ಯಾಯರು ಕೋಪಗೊಂಡು ತಿಮಿಂಗಿಲಕ್ಕೆ ಮನುಷ್ಯನನ್ನು ತಿನ್ನಲು ಸಾಧ್ಯವೇ ಇಲ್ಲ ಎಂದು ದೃಢವಾಗಿ ಹೇಳಿದರು.

"ನಾನು ಸ್ವರ್ಗಕ್ಕೆ ಹೋದಾಗ ಜೋನಾನನ್ನು ಈ ಬಗ್ಗೆ ವಿಚಾರಿಸುತ್ತೇನೆ," ಚಿಕ್ಕ ಹುಡುಗಿ ಹೇಳಿತು. "ಜೋನಾ ನರಕಕ್ಕೆ ಹೋಗಿಬಿಟ್ಟಿದ್ದರೆ ಏನು ಮಾಡುತ್ತಿ?" ಉಪಾಧ್ಯಾಯರು ಕೇಳಿದರು. "ಆಗ ನೀವು ವಿಚಾರಿಸಿ"—ಥಟ್ಟನೆ ಉತ್ತರಿಸಿತು ಚಿಕ್ಕ ಹುಡುಗಿ.

✩ ✩ ✩

**ಉಪಾಧ್ಯಾಯ** : "ಜನರು ಆಸಕ್ತಿಯಿಂದ ಕೇಳುತ್ತಿರದಿದ್ದರೂ ಎಡೆಬಿಡದೆ ಮಾತನಾಡುವವನನ್ನು ಏನೆಂದು ಕರೆಯುತ್ತೀರಿ?"

**ವಿದ್ಯಾರ್ಥಿ** : "ಉಪಾಧ್ಯಾಯ."

◆